# ಸ್ವಾಮಿ ಅಪೂರ್ವಾನಂದ (೧೯೦೦-೧೯೯೦)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**



೧೯೫೫ರ ದುರ್ಗಾಪೂಜೆಗೆ ಮುಂಚೆ ಕೆಲವು ದಿನಗಳು ಕಾಶಿಯ ಅದ್ವೈತ ಆಶ್ರಮದಲ್ಲಿದ್ದೆ. ಸ್ವಾಮಿ ಅಪೂರ್ವಾನಂದಜಿಯವರು ಆಗ ಆಶ್ರಮದ ಅಧ್ಯಕ್ಷರಾಗಿದ್ದರು. ನಾನು ವಿದ್ಯಾರ್ಥಿಯಾಗಿದ್ದಾಗ ಅವರ **'ಶಿವಾನಂದ ವಾಣಿ'**(೨ ಭಾಗಗಳು)ಯನ್ನು ಓದಿ ಪ್ರಭಾವಿತನಾಗಿದ್ದೆ. ಸ್ವಾಮಿ ಅಪೂರ್ವಾನಂದರು ಪ್ರತಿದಿನವೂ ಬೆಳಗ್ಗೆ ವರಾಂಡದಲ್ಲಿ ಕುಳಿತು ಠಾಕೂರರ ಭೋಗಕ್ಕಾಗಿ ತರಕಾರಿಗಳನ್ನು ಹೆಚ್ಚುತ್ತಿದ್ದರು; ಸಾಯಂಕಾಲ ಆರತಿಯ ಹಾಡನ್ನು ಹಾಡುತ್ತಿದ್ದರು. ಅವರು ಶ್ರೀಮಾತೆಯವರ ಶಿಷ್ಯರೂ ಮಹಾಪುರುಷ ಮಹಾರಾಜರ ಸೇವಕರೂ ಆಗಿದ್ದರು. ಠಾಕೂರರ ಪಾರ್ಷದರ ಅನೇಕ ಸ್ಮೃತಿಗಳನ್ನು ಸಂಗ್ರಹಿಸಿ ಪ್ರಕಾಶಿಸಿದ್ದಲ್ಲದೆ ಅವರು ಅನೇಕ ಗ್ರಂಥಗಳನ್ನೂ ರಚಿಸಿರುವರು.

ಮಹಾರಾಜರು ನನ್ನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದರು. ನಾನು ಅಮೆರಿಕಾದಿಂದ ಕಾಶಿಗೆ ಬಂದಾಗಲೆಲ್ಲ ಆರತಿಯ ಬಳಿಕ ಭಕ್ತರನ್ನು ಸಂಬೋಧಿಸಿ ಮಾತನಾಡಬೇಕೆಂದು ನನ್ನನ್ನು ಕೇಳಿಕೊಳ್ಳುತ್ತಿದ್ದರು.

**೨೮.೦೮.೧೯೮೨, ಅದ್ವೈತ ಆಶ್ರಮ, ಕಾಶಿ**

ಮಂತ್ರದೀಕ್ಷೆಯ ವಿಷಯವಾಗಿ ನಾನು ಅವರನ್ನು ಕೇಳಿದಾಗ ಅವರೆಂದರು : ''ಠಾಕೂರರು ಶ್ರೀಮಾತೆಯವರಿಗೆ ನಾಲ್ಕು ಸಿದ್ಧ ಮಂತ್ರಗಳನ್ನು ಕೊಟ್ಟಿದ್ದರು. ಅವುಗಳು ಪರಂಪರಾಗತವಾಗಿ ನಡೆದುಕೊಂಡು ಬರುತ್ತಿವೆ. ಅವುಗಳನ್ನು ಶ್ರೀಮಾತೆಯವರಿಂದ ಪಡೆದ ವಿರಜಾನಂದರು ಅವನ್ನು ಬರೆದಿಟ್ಟುಕೊಂಡರು.

''ಶ್ರೀಮಾತೆಯವರು ದೀಕ್ಷೆ ನೀಡುವಾಗ ಅನೇಕರಿಗೆ ಅವರ ಇಷ್ಟದೇವರ ದರ್ಶನವನ್ನು ಮಾಡಿಸಿದ್ದರು-'ಅಗೋ ನೋಡು, ನಿನ್ನ ಇಷ್ಟದೇವತೆ' ಎನ್ನುತ್ತಿದ್ದರು.

''ಶ್ರೀಮಾತೆಯವರು ಎಂದೂ ತಾವು ಗುರುಗಳೆಂಬ ಅಧಿಕಾರವನ್ನು ತೋರಿಸಿದವರಲ್ಲ. 'ಠಾಕೂರರೇ ಗುರು' ಎನ್ನುತ್ತಿದ್ದರು.

''ಶ್ರೀಮಾತೆಯವರು ಮಂತ್ರದೀಕ್ಷೆ ನೀಡುವಾಗ ಯಾವ ವಿಧಿವಿಧಾನವನ್ನೂ ಅನುಸರಿಸುತ್ತಿರಲಿಲ್ಲ.

''ಮಹಾಪುರುಷಜೀಯವರು ಠಾಕೂರರ ಸ್ಥೂಲರೂಪ ದರ್ಶನವನ್ನು ಪಡೆಯುತ್ತಿದ್ದರು. ಎರಡು ದಿನಗಳು ಮಾತ್ರವೇ ದರ್ಶನವನ್ನು ಪಡೆದಿರಲಿಲ್ಲ. ೧) ಬೇಲೂರು ಮಠದ ಗೋಶಾಲೆಗೆ ಬೆಂಕಿ ಹಿಡಿದ ದಿನ ೨) ಅಂಗಳದ ತುಂಬ ಮುಳ್ಳುಗಿಡಗಳು ಹರಡಿದ್ದಾಗ.

''ಮಹಾಪುರುಷಜಿ ಒಂದು ದಿನ ನನ್ನ ಹೆಗಲ ಮೇಲೆ ಕೈಯೂರಿ ಕೋಣೆಯಿಂದ ಹೊರಬಂದು ಪೂರ್ವದಿಕ್ಕಿನ ವರಾಂಡದಲ್ಲಿ ನಿಂತು ಹೇಳಿದರು: ''ಇದು ಮುಕ್ತ ಶರೀರ. ಇದರ ದರ್ಶನವನ್ನು ಮಾಡಿದವರೆಲ್ಲ ಮುಕ್ತರಾಗುವರು.''

ಸ್ವಾಮಿ ಅಪೂರ್ವಾನಂದರು ಪೂರ್ವ ಬಂಗಾಳದ ನೋವಾಖಾಲಿ ಜಿಲ್ಲೆಯಲ್ಲಿ ಜನಿಸಿದರು. ೧೯೧೮ರಲ್ಲಿ ಬೇಲೂರು ಮಠಕ್ಕೆ ಬಂದು ಮಹಾಪುರುಷಜಿಯವರ ದರ್ಶನವನ್ನು ಮಾಡಿದ್ದ ಅವರು, ನಂತರ ಬಲರಾಮ ಮಂದಿರದಲ್ಲಿ ರಾಜಾ ಮಹಾರಾಜ್ ಹಾಗೂ ಸ್ವಾಮಿ ತುರೀಯಾನಂದರ ದರ್ಶನವನ್ನೂ ಮಾಡಿ, 'ಉದ್ಬೋಧನ'ದಲ್ಲಿ ಸ್ವಾಮಿ ಶಾರದಾನಂದ ಹಾಗು ಶ್ರೀಮಾತೆಯವರ ದರ್ಶನವನ್ನು ಪಡೆದರು. ೧೯೧೯ರಲ್ಲಿ ರಾಮಕೃಷ್ಣ ಸಂಘವನ್ನು ಸೇರಿ ಬಾಂಕುರಾದಲ್ಲಿ ಬರಗಾಲದ ಸೇವಾಕಾರ್ಯದಲ್ಲೂ ಪಾಲ್ಗೊಂಡಿದ್ದರು. ೧೯೮೭ರ ಅಕ್ಟೋಬರ್ ೩ರಂದು ಅವರು ಶ್ರೀಮಾತೆಯವರ ನೆನಪುಗಳನ್ನು ವಿಸ್ತಾರವಾಗಿ ಮಾಡಿಕೊಂಡಾಗ ನಾನು ಅದನ್ನು ರೆಕಾರ್ಡ್ ಮಾಡಿಕೊಂಡೆ.

ಅವರ ಶ್ರೀಮಾತೆಯವರ ನೆನಪುಗಳನ್ನು 'ಶತರೂಪೇ ಶಾರದಾ' ಹಾಗೂ 'ಶ್ರೀ ಶ್ರೀ ಮಾಯೇರ್ ಪದಪ್ರಾಂತೇ'

(ಪ್ರಥಮ ಭಾಗ) ಎಂಬ ಬಂಗಾಳಿ ಪುಸ್ತಕಗಳಲ್ಲಿ ಪ್ರಕಟಿಸಲಾಗಿದೆ. ಆದ್ದರಿಂದ ನಾನು ಅವುಗಳನ್ನು ಪುನಃ ಇಲ್ಲಿ ಉಲ್ಲೇಖಿಸುವುದಿಲ್ಲ. ಆದರೂ ಕೆಲವು ವಿಶೇಷ ಘಟನೆಗಳನ್ನು ಇಲ್ಲಿ ಬರೆಯುತ್ತಿದ್ದೇನೆ.

ಶ್ರೀಮಾತೆಯವರು ಪಲ್ಲಕಿಯಲ್ಲಿ ಕುಳಿತುಕೊಂಡು ಸೇವಾಶ್ರಮವನ್ನು ಸುತ್ತಾಡಿದಾಗ ಕೇದಾರಬಾಬಾ (ಸ್ವಾಮಿ ಅಚಲಾನಂದರು) ಮಾರ್ಗದರ್ಶಕರಾಗಿ ಅವರಿಗೆ ಎಲ್ಲವನ್ನೂ ತೋರಿಸಿದರು. ಶ್ರೀಮಾತೆಯವರು ಕುಂಟಿಕೊಂಡು ನಡೆಯುತ್ತಿದ್ದುದರಿಂದ ಅವರಿಗೆ ಅನುಕೂಲವಾಗುವಂತೆ ರಾಜಾ ಮಹಾರಾಜರು ಈ ವ್ಯವಸ್ಥೆಯನ್ನು ಮಾಡಿದ್ದರು. ಸೇವಾಶ್ರಮದ ಚಟುವಟಿಕೆಗಳನ್ನು ವೀಕ್ಷಿಸಿ, ಅದರ ಬಗ್ಗೆ ವಿಸ್ತಾರವಾಗಿ ಕೇಳಿದ ಶ್ರೀಮಾತೆ ತಮ್ಮ ಆನಂದವನ್ನು ವ್ಯಕ್ತಪಡಿಸುತ್ತ, ''ಇಲ್ಲಿ ಶ್ರೀರಾಮಕೃಷ್ಣರು ಸ್ವತಃ ವಿರಾಜಮಾನರಾಗಿರುವರು; ಲಕ್ಷ್ಮೀದೇವಿಯು ಪೂರ್ಣರೂಪದಲ್ಲಿ ಇಲ್ಲಿ ನೆಲೆಸಿರುವಳು'' ಎಂದರು. ತದನಂತರ ತಾವು ಇಳಿದುಕೊಂಡಿದ್ದ 'ಲಕ್ಷ್ಮೀ ನಿವಾಸ'ಕ್ಕೆ ಮರಳಿ ಹತ್ತು ರೂಪಾಯಿಗಳ ನೋಟು ಒಂದನ್ನು ಚಾರುಬಾಬು (ನಂತರ ಸ್ವಾಮಿ ಶುಭಾನಂದ) ಅವರ ಮೂಲಕ ಕಳುಹಿಸಿದರು. ಶ್ರೀಮಾತೆಯವರು ಕೊಟ್ಟ ಈ ನೋಟನ್ನು ಇಂದಿಗೂ ಸೇವಾಶ್ರಮದ ಆಫೀಸಿನಲ್ಲಿ ಸುರಕ್ಷಿತವಾಗಿ ಇರಿಸಲಾಗಿದೆ.

೧೯೧೨ರಲ್ಲಿ ಶ್ರೀಮಾತೆಯವರು ಕಾಶಿಯಲ್ಲಿದ್ದಾಗ ಅಲ್ಲಿ ರಾಜಾ ಮಹಾರಾಜ್, ಮಹಾಪುರುಷ ಮಹಾರಾಜ್ ಹಾಗೂ ಹರಿ ಮಹಾರಾಜರೂ ಇದ್ದರು. ಸ್ವಾಮಿ ವಿಜ್ಞಾನಾನಂದಜಿ ಶ್ರೀಮಾತೆಯವರನ್ನು ಭೇಟಿಯಾಗಲು ಅಲಾಹಾಬಾದಿನಿಂದ ಬಂದಿದ್ದರು. ಲಾಟು ಮಹಾರಾಜರು ಕಾಶಿಯಲ್ಲೇ ಇದ್ದರೂ, ಅವರು ಆಶ್ರಮದಲ್ಲಿರುತ್ತಿದ್ದರು. ಮೊದಲ ಕೆಲವು ದಿನಗಳಲ್ಲಿ ಅವರು ಅದ್ವೈತ ಆಶ್ರಮದಲ್ಲಿದ್ದರು, ಯಾವುದೇ ದಿನಚರಿ ಅನುಸರಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಅವರ ಸಾಧನೆ-ಭಜನೆಗಳು ನಿರ್ದಿಷ್ಟ ಸಮಯದಲ್ಲಿ ನಡೆಯುತ್ತಿರಲಿಲ್ಲ. ಹಾಗಾಗಿ ಅವರು ಹೊರಗೆ ಬಾಡಿಗೆ ಮನೆಯೊಂದರಲ್ಲಿ ಇರುತ್ತಿದ್ದರು. ಕೆಲವು ಭಕ್ತರು ಅವರ ಆಹಾರದ ವ್ಯವಸ್ಥೆಯನ್ನೂ ಮಾಡಿ, ಅವರ ಸೇವೆ ಮಾಡುತ್ತ ನೋಡಿಕೊಳ್ಳುತ್ತಿದ್ದರು. ಲಾಟು ಮಹಾರಾಜರು ಕೆಲವೊಮ್ಮೆ ಅವರೊಡನೆ ಸತ್ಸಂಗವನ್ನೂ ಮಾಡುತ್ತಿದ್ದರು.

ಒಂದು ದಿನ ಲಾಟು ಮಹಾರಾಜರು ಭಕ್ತರಿಗೆಂದರು, ''ನಾಳೆ ಮುಂಜಾನೆ ನಾನು ವಿಶ್ವನಾಥನ ದರ್ಶನಕ್ಕೆ ಹೋಗುತ್ತೇನೆ. ಪೂಜೆಗಾಗಿ ನೀವು ಹೂವು-ಬಿಲ್ವಪತ್ರೆಗಳನ್ನು ತನ್ನಿ.'' ಮರುದಿನ ಭಕ್ತರು ಹೂ-ಬಿಲ್ವಪತ್ರೆಗಳೊಂದಿಗೆ ಹಾಜರಾದರು. ಲಾಟು ಮಹಾರಾಜರು ಅವರೊಂದಿಗೆ ಹೊರಟರು. ಮುಖ್ಯ ರಸ್ತೆಯನ್ನು ತಲುಪಿದಾಗ, ಅವರಿಗೇನು ತೋಚಿತೋ - ಅವರೆಂದರು, ''ಮೊದಲು ಶ್ರೀಮಾತೆಯವರ ಬಳಿಗೆ ಹೋಗೋಣ, ನಡೆಯಿರಿ.'' ಚಿಕ್ಕ ಮಗುವಿನಂತೆ 'ಅಮ್ಮಾ, ಅಮ್ಮಾ' ಎನ್ನತೊಡಗಿದರು. 'ಲಕ್ಷ್ಮೀನಿವಾಸ'ದ ಮೇಲಂತಸ್ತಿನಲ್ಲಿದ್ದ ಶ್ರೀಮಾತೆಯವರ ಕೋಣೆಯ ಎದುರು ಬಂದಾಗ ಅವರು ಭಾವಾವಸ್ಥೆಗೆ ಒಳಗಾದರು. ನಡಗುತ್ತ, ನಡಗುತ್ತ ಶ್ರೀಮಾತೆಯವರ ಪಾದಪದ್ಮಗಳಿಗೆ ಪುಷ್ಪಾಂಜಲಿಯನ್ನು ಅರ್ಪಿಸಿ ಕಣ್ಣೀರು ಸುರಿಸತೊಡಗಿದರು. ಈ ದೃಶ್ಯವನ್ನು ಕಣ್ಣಾರೆ ಕಂಡ ವಿಭೂತಿ ಬಾಬು ಹೀಗೆ ಬರೆಯುತ್ತಾರೆ: ''ಇದೊಂದು ಅತೀವ ಮನೋಹರ ದೃಶ್ಯವಾಗಿತ್ತು. ಅವರು ಅಂದು ಶ್ರೀಮಾತೆಯವರಿಂದ ಬೀಳ್ಕೊಂಡು ಶ್ರೀ ವಿಶ್ವನಾಥನ ದರ್ಶನಕ್ಕೆ ಹೋದರು. ತಮ್ಮ ಮಾತೃಭಕ್ತಿಯನ್ನು ಲಾಟು ಮಹಾರಾಜರು ಇಚ್ಛಾಪೂರ್ವಕವಾಗಿ ಗುಪ್ತವಾಗಿಡುತ್ತಿದ್ದರು.''

ಸ್ವಾಮಿ ಅಪೂರ್ವಾನಂದರು ಅನೇಕ ವರ್ಷ ಕಾಶಿಯ ಅದ್ವೈತ ಆಶ್ರಮದ ಅಧ್ಯಕ್ಷರಾಗಿದ್ದರು. ಶ್ರೀಮಾತೆಯವರ ಈ ಕೆಳಗಿನ ಅಮೂಲ್ಯ ಘಟನೆಯನ್ನು ಅವರು ಹೇಳಿದಾಗ ನಾನದನ್ನು ಟೇಪ್ ಮಾಡಿಕೊಂಡೆ. ಅವರು ಅದನ್ನು 'ಜನನಿ ಶಾರದಾ ದೇವಿ' ಎಂಬ ಪುಸ್ತಕದಲ್ಲಿ ಬರೆದಿರುವರು:


ಅದ್ವೈತ ಆಶ್ರಮ, ವಾರಾಣಸಿ



''ಶ್ರೀಮಾತೆಯವರು ೧೯೧೨ನೆ ಇಸವಿಯಲ್ಲಿ ಕಡೆಯ ಬಾರಿ ಕಾಶಿಗೆ ಬಂದರು. ಅದ್ವೈತ ಆಶ್ರಮದ ಮೇಲೆ ಅವರಿಗೆ ವಿಶೇಷ ಪ್ರೀತಿ. ಆಶ್ರಮಕ್ಕೆ ಬಂದಾಗಲೆಲ್ಲ ಅವರು ಮೊದಲು ಠಾಕೂರರಿಗೆ ಪ್ರಣಾಮ ಮಾಡಿ, ಠಾಕೂರರ ಗೃಹದಲ್ಲಿ ಸ್ವಲ್ಪ ಹೊತ್ತು ಕುಳಿತುಕೊಳ್ಳುತ್ತಿದ್ದರು.

''ಅದ್ವೈತ ಆಶ್ರಮಕ್ಕೆ ಅವರು ಕಡೆಯ ಬಾರಿ ಬಂದದ್ದು ಕಲ್ಕತ್ತೆಗೆ ಹೊರಡುವ ೨-೩ ದಿನಗಳ ಹಿಂದೆ, ಸುಮಾರು ಹತ್ತು ಗಂಟೆಯ ಹೊತ್ತಿಗೆ. ಮೊದಲು ಮಾಡಿದ್ದ ವ್ಯವಸ್ಥೆಯಂತೆ ಸ್ವಾಮಿ ಶಾಂತಾನಂದರು ಅಂದು ಶ್ರೀಮಾತೆಯವರೊಡನೆ ಇದ್ದರು. ಅದ್ವೈತಾಶ್ರಮಕ್ಕೆ ಕಾಲಿಡುತ್ತಲೆ ಅವರು ನೇರ ಠಾಕೂರರ ಮಂದಿರಕ್ಕೆ ಹೋಗಿ, ಒಳಗಿನಿಂದ ಬಾಗಿಲನ್ನು ಮುಚ್ಚಿದರು. ಅಂದು ಅವರು ಯಾರಿಗೂ ಕಾಣಿಸದಂತೆ ತಮ್ಮ ಸೀರೆಯ ಸೆರಗಿನಲ್ಲಿರಿಸಿಕೊಂಡು ಕಟ್ಟು ಹಾಕಿಸಿದ್ದ ತಮ್ಮದೊಂದು ಭಾವಚಿತ್ರವನ್ನು ತಂದಿದ್ದರೆಂದು ನಂತರ ತಿಳಿಯಿತು. ಒಳಗೆ ಹೋದ ಅವರು ಠಾಕೂರರಿಗೆ ಪ್ರಣಾಮ ಮಾಡಿ, ಮಂದಿರದ ಪೂರ್ವ ದಿಕ್ಕಿನ ಗೋಡೆಯಲ್ಲಿದ್ದ ಖಾಲಿ ಗೂಡಿನಲ್ಲಿ ತಮ್ಮ ಭಾವಚಿತ್ರವನ್ನಿರಿಸಿ, ವಸ್ತ್ರದಂಚಿನಲ್ಲಿ ಕಟ್ಟಿಕೊಂಡಿದ್ದ ಹೂವು-ಬಿಲ್ವಪತ್ರೆಗಳನ್ನು ಅರ್ಪಿಸಿ ತಮ್ಮ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಸ್ವಲ್ಪ ನಂತರವೇ ಅಲ್ಲಿಂದ ಹೊರಬಂದು ಚಂದ್ರ ಮಹಾರಾಜನ್ನು ಕರೆದು ಹೇಳಿದರು: ''ಮಗು ಚಂದ್ರ, ಗೂಡಿನಲ್ಲಿರಿಸಿದ ಚಿತ್ರಪಟಕ್ಕೂ ದಿನಾ ಕೆಲವು ಹೂಗಳನ್ನರ್ಪಿಸು.'' ಚಂದ್ರ ಮಹಾರಾಜರು ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಅವರ ಅನುಜ್ಞೆಯನ್ನು ಶಿರಸಾ ವಹಿಸಿಕೊಂಡರು. ಇತ್ತ ಶ್ರೀಮಾತೆಯವರು ಬಂದಿರುವರೆಂಬ ಸುದ್ದಿ ತಿಳಿದ ಉಳಿದ ಸಾಧುಗಳೆಲ್ಲರೂ ಬಂದು ಅವರ ಪಾದಗಳಿಗೆ ನಮಸ್ಕರಿಸಿದಾಗ ಅವರು ಎಲ್ಲರನ್ನೂ ಆಶೀರ್ವದಿಸಿ 'ಲಕ್ಷ್ಮೀನಿವಾಸ'ಕ್ಕೆ ತೆರಳಿದರು.

''ಶ್ರೀಮಾತೆಯವರು ಹೊರಟುಹೋದಾಗ ಚಂದ್ರ ಮಹಾರಾಜರು ಗರ್ಭಮಂದಿರಕ್ಕೆ ಹೋಗಿ ನೋಡಿದಾಗ, ಶ್ರೀಮಾತೆಯವರು ಖಾಲಿಯಿದ್ದ ಗೂಡಿನಲ್ಲಿ ತಮ್ಮ ಚಿತ್ರವನ್ನಿರಿಸಿ ಪೂಜಿಸಿ ಹೋಗಿದ್ದಾರೆ! ಅವರು ಕೂಡಲೆ ಮಹಾಪುರುಷ ಮಹಾರಾಜರಿಗೆ ನಡೆದುದನ್ನೆಲ್ಲ ಹೇಳಿದರು. ಅವರೂ ಠಾಕೂರರ ಗರ್ಭಮಂದಿರಕ್ಕೆ ಹೋಗಿ, ಗೋಡೆಯಲ್ಲಿದ್ದ ಗೂಡಿನಲ್ಲಿ ಶ್ರೀಮಾತೆಯವರ ಚಿತ್ರವನ್ನು ನೋಡಿದರು. ಅವರು ತಕ್ಷಣವೇ ಠಾಕೂರ್, ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಸೇವಾಶ್ರಮದಲ್ಲಿದ್ದ ರಾಜಾ ಮಹಾರಾಜರಿಗೆ ನಡೆದುದೆಲ್ಲ ವಿವರಿಸಿದರು. ಅವರು ತಮ್ಮ ದುಃಖವನ್ನು ಪ್ರಕಟಿಸುತ್ತ ಗಂಭೀರ ದನಿಯಲ್ಲಿ ಹೇಳಿದರು. 'ತಾರಕ ದಾ (ಅಣ್ಣ), ಇದು ಒಳ್ಳೆಯ ಲಕ್ಷಣವಲ್ಲ. ಶ್ರೀಮಾತೆಯವರು ಹೋಗುವ ತಯಾರಿಯಲ್ಲಿದ್ದಾರೆಂದು ತೋರುತ್ತಿದೆ!'

''ಹರಿ ಮಹಾರಾಜರು ಸೇವಾಶ್ರಮದಲ್ಲೆ ಇದ್ದರು. ಮಹಾಪುರುಷಜಿ ಹರಿ ಮಹಾರಾಜರಿಗೆ ಸಂಗತಿಯನ್ನು ತಿಳಿಸಿದಾಗ ಅವರು ಅತ್ಯಂತ ಖೇದದಿಂದ, 'ಮಹಾಮಾಯೆಯ ಇಚ್ಛೆಯಂತೆ ಆಗುತ್ತದೆ' ಎಂದು ಉದ್ಗರಿಸುತ್ತಿದ್ದರು. ಅಂದಿನಿಂದ ಕಾಶಿಯ ಅದ್ವೈತ ಆಶ್ರಮದಲ್ಲಿ ಶ್ರೀಮಾತೆಯವರ ಭಾವಚಿತ್ರದ ಪೂಜೆ ನಡೆದುಕೊಂಡು ಬಂದಿದೆ. ಕಾಶಿ ಅದ್ವೈತ ಆಶ್ರಮದ ಶ್ರೀಮಾತೆಯವರ ಪಟದ ಪೂಜೆಯ ಬಗ್ಗೆ ನಾನು ಕೇಳಿದ್ದು ಮಹಾಪುರುಷ ಮಹಾರಾಜರಿಂದ. ಅವರು ೧೯೨೮ರಲ್ಲಿ ಕೇದಾರಬಾಬಾ ಅವರೊಂದಿಗೆ ಮಾತನಾಡುತ್ತಿದ್ದಾಗ ಅವರಿಗೆ ಹೇಳಿದ್ದರು. ನಂತರ ನಾವು ಯೋಗೇನ್ ಮಹಾರಾಜ್, ಶಾಂತಾನಂದ ಮಹಾರಾಜ್ ಮೊದಲಾದವರಿಂದಲೂ ಕೇಳಿದ್ದೆವು.''

ಸ್ವಾಮಿ ಅಪೂರ್ವಾನಂದರು ದೀರ್ಘ ಸಮಯ ಮಹಾಪುರುಷ ಮಹಾರಾಜರ ಸೇವಕರಾಗಿದ್ದರು. ಅವರು ಬರೆದ 'ಮಹಾಪುರುಷ ಶಿವಾನಂದ', 'ಶಿವಾನಂದ ವಾಣಿ', 'ಶಿವಾನಂದ ಪತ್ರಸಂಗ್ರಹ', 'ಸ್ವಾಮಿ ಶಿವಾನಂದ ಸ್ಮೃತಿಸಂಗ್ರಹ', 'ಸತ್ಪ್ರಸಂಗೇ ಸ್ವಾಮಿ ವಿಜ್ಞಾನಾನಂದ', ಮುಂತಾದ ಪುಸ್ತಕಗಳು ಅಮೂಲ್ಯವೆನಿಸಿವೆ. ೧೯೯೦ರಲ್ಲಿ ನಾನು ಕಾಶಿಗೆ ಹೋದಾಗ ಅಪೂರ್ವಾನಂದ ಮಹಾರಾಜರು ಸೇವಾಶ್ರಮದ ಆಸ್ಪತ್ರೆಯಲ್ಲಿ ಹಾಸಿಗೆ ಹಿಡಿದಿದ್ದರು. ಅದೇ ವರ್ಷ ಅಕ್ಟೋಬರ್ ಹನ್ನೊಂದನೆಯ ತಾರೀಖಿನಂದು ಅವರು ತಮ್ಮ ಇಹಶರೀರವನ್ನು ತ್ಯಜಿಸಿದರು. ✽

## ಋಣಮುಕ್ತಿ

'ಭಕ್ತಿವಿಜಯ' ದ ಕರ್ತೃವಾದ ಸಂತ ಮಹೀಪತಿ ಮೊದಲು ಗ್ರಾಮಮುಖಂಡನಾಗಿದ್ದ. ಒಂದು ಸಲ ಅವನು ಪೂಜೆ ಮಾಡುತ್ತಿದ್ದಾಗ ಜಹಗೀರ್‌ದಾರನು ಅವನಿಗಾಗಿ ಹೇಳಿ ಕಳುಹಿಸಿದ. ಅವನಿಂದ ಏನೋ ಅವಸರದ ಕೆಲಸವಾಗಬೇಕಿತ್ತು. ಮಹೀಪತಿಗೆ ಇಕ್ಕಟ್ಟಿನಲ್ಲಿ ಸಿಲುಕಿದಂತಾಯಿತು. ಹೋಗದೆ ನಿರ್ವಾಹವಿಲ್ಲ; ಆದರೆ ಅದರಿಂದ ಪೂಜೆ ನಿಂತು ಹೋಗುವುದಲ್ಲ!

ಕೊನೆಗೂ ಅವನು ಪೂಜೆ ನಿಲ್ಲಿಸಿ ಹೊರಟುಹೋದ; ಕೆಲಸ ಮುಗಿಸಿಬಂದು ಪೂಜೆ ಮುಂದುವರಿಸಿದ. ಆದರೆ ಅವನಿಗೆ ಅತ್ಯಂತ ದುಃಖವುಂಟಾಯಿತು, ತನ್ನನ್ನೇ ತಾನು ಹಳಿದುಕೊಂಡ. ಇದೆಂಥ ಜೀವನ! ತನ್ನ ಇಚ್ಛೆಗೆ ಅನುಗುಣವಾಗಿ ದೇವರ ಪೂಜೆಯನ್ನೂ ಮಾಡಲಾಗದೆ ಹೋಯಿತಲ್ಲ! - ಎಂದು. ತಡವಿಲ್ಲದೆ ಅವನು ಕೆಲಸಕ್ಕೆ ರಾಜಿನಾಮೆ ಕೊಟ್ಟ. ತನ್ನ ಲೇಖನಿಯನ್ನು ದೇವರ ಕೆಲಸಕ್ಕಾಗಿ ಮಾತ್ರ ಬಳಸುವುದಾಗಿ ಪ್ರತಿಜ್ಞೆ ಮಾಡಿದ. ಬಳಿಕ ಅನೇಕ ಭಕ್ತಿಪರವಾದ ಕೃತಿಗಳನ್ನು ರಚಿಸಿದ.